ಒಳಗೆ ಆಗಬೇಕಾಗಿತ್ತು. ಆದರೆ, ಶಾಲೆ ಶುರುವಾಗಿ ಒಂದು ತಿಂಗಳ ನಂತರ ಯಾಕಾಯಿತು? ಹೊಸ ಶಿಕ್ಷಕರುಗಳನ್ನು ಏನು ನೇಮಿಸಿದ್ದೀರಿ, ಅವರನ್ನು ಬೆಳಗಾವಿ ನಗರದಲ್ಲಿ ನೇಮಿಸಿದ್ದೀರಿ. ಇದು ಹೇಗಾಗುತ್ತದೆ? ಅಂದರೆ, ನಿಮ್ಮದೇ ಅಧಿಸೂಚನೆ ಪ್ರಕಾರ, ನಿಮ್ಮದೇ ಗೈಡ್‌ಲೈನ್ಸ್ ಪ್ರಕಾರ ನೀವು ಹೊಸ ಶಿಕ್ಷಕರುಗಳನ್ನು ಹಳ್ಳಿಗಳಿಗೆ ನೇಮಿಸಬೇಕೆಂದು ಅಧಿಸೂಚನೆ ಇರುವಾಗ ಬೆಳಗಾವಿ ನಗರಕ್ಕೆ ಏಕೆ ನೇಮಿಸಿದ್ದೀರಿ?

ಶ್ರೀ ಬಿ.ಎಸ್. ಹೊರಟ್ಟಿ :– ಮಾನ್ಯ ಅಧ್ಯಕ್ಷರೆ, ನನ್ನ ಕಡೆ ಇರುವ ಮಾಹಿತಿ ಪ್ರಕಾರ ಹೆಚ್ಚುವರಿ ಶಿಕ್ಷಕರುಗಳನ್ನು ವರ್ಗಾವಣೆ ಮಾಡಿದ್ದೇವೆ. ಹೆಚ್ಚುವರಿ ಶಿಕ್ಷಕರುಗಳನ್ನು ಕಳೆದ ವರ್ಷದ ಅಕ್ಟೋಬರ್ ತಿಂಗಳಿನಲ್ಲಿ ವರ್ಗಾವಣೆ ಮಾಡಬೇಕಾಗಿತ್ತು. ಅದು ವರ್ಷದ ಮಧ್ಯಮದಲ್ಲಾಗುವುದರಿಂದ ಏಪ್ರಿಲ್ ತಿಂಗಳಿನಲ್ಲಿ ಮಾಡಿದ್ದೇವೆ. ಈಗ ಮಾನ್ಯ ಸದಸ್ಯರು ಹೇಳಿದಂತೆ, ಒಂದು ವೇಳೆ ಹೆಚ್ಚುವರಿ ಶಿಕ್ಷಕರಿದ್ದು, ಅವರನ್ನು ಇಲ್ಲೆಲ್ಲಾದರೂ ನೇಮಿಸಿದ್ದರೆ, ತಕ್ಷಣ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಿಗೊಳ್ಳುತ್ತೇನೆ.

ಶ್ರೀ ರಮೇಶ್ ಲಕ್ಷ್ಮಣ್ ಕುಡಚಿ :– 11 ಹೊಸ ಶಿಕ್ಷಕರುಗಳನ್ನು ಬೆಳಗಾವಿ ನಗರದಲ್ಲಿ ನೇಮಿಸಿದ್ದಾರೆ.

ಅಧ್ಯಕ್ಷರು :– ತಾವು ಸಚಿವರನ್ನು ಭೇಟಿಯಾಗಿ ನಿಮಗೆ ಸಂಬಂಧಿಸಿದ ಯಾವುದಾದರೂ ಸಮಸ್ಯೆ ಇದ್ದರೆ, ಪರಿಹರಿಸಿಕೊಳ್ಳಿ. ಸುಮ್ಮನೆ ಏಕೆ ಇಲ್ಲಿ ಸಮಯ ಹಾಳು ಮಾಡುತ್ತೀರಿ?

ಶ್ರೀ ಬಿ.ಎಸ್. ಹೊರಟ್ಟಿ :– ಹೆಚ್ಚುವರಿ ಶಿಕ್ಷಕರುಗಳನ್ನು ಅಲ್ಲಿಗೆ ನೇಮಿಸಿದ್ದಲ್ಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

<u>ಹೇಮಾವತಿ ಹಿನ್ನೀರಿನ ಶೀತಪೀಡಿತ ಪ್ರದೇಶದ ಹಳ್ಳಿಗಳಿಗೆ ಪುನರ್‌ವಸತಿ ಕಲ್ಪಿಸುವುದು</u> :–

119 (806) ಶ್ರೀ ಹೆಚ್.ಎಂ. ವಿಶ್ವನಾಥ್ (ಸಕಲೇಶಪುರ) :– ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಜಲಾನಯನ ಹಿನ್ನೀರಿನ ಶೀತಪೀಡಿತ ಪ್ರದೇಶದ ಆಲೂರು ಮತ್ತು ಅಕಲೇಶಪುರ ತಾಲ್ಲೂಕಿನ 17 ಹಳ್ಳಿಗಳ ಸಂತ್ರಸ್ಥರಿಗೆ ಪುನರ್‌ವಸತಿ ಕಲ್ಪಿಸುವ ಬಗ್ಗೆ ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಕರೆದಂತಹ ಸಭೆಯ ನಂತರ ಕೈಗೊಂಡ ಕ್ರಮಗಳೇನು;

ಆ) ಪುನರ್ವಸತಿ ಒದಗಿಸಬೇಕಾದ ಗ್ರಾಮಗಳ ಸ್ಥಿತಿಗತಿಯ ವರದಿಯನ್ನು ಸಿದ್ಧಪಡಿಸಲಾಗಿದೆಯೇ; ಸಿದ್ಧಪಡಿಸಿದ್ದರೆ ಯಾರಿಗೆ ಸಲ್ಲಿಸಲಾಗಿದೆ;

ಇ) ಈ ಪ್ರಕ್ರಿಯೆ ಯಾವ ಹಂತದಲ್ಲಿದೆ (ವಿವರ ನೀಡುವುದು)?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) :

ಅ) ಹೇಮಾವತಿ ಜಲಾನಯನ ಹಿನ್ನೀರಿನ ಶೀತಪೀಡಿತ ಪ್ರದೇಶದ ಆಲೂರು ಮತ್ತು ಸಕಲೇಶಪುರ ತಾಲ್ಲೂಕಿನ 17 ಹಳ್ಳಿಗಳ ಸಂತ್ರಸ್ಥರಿಗೆ ಪುನರ್ ವಸತಿ ಕಲ್ಪಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 11-05-2007 ರಂದು ನಡೆದ ಸಭೆಯಲ್ಲಿ ಮಾನ್ಯ ಹಾಸನ ಜಿಲ್ಲಾ ಉಸ್ತುವಾರಿ ಸಚಿವರ ಕೋರಿಕೆಯಂತೆ ಹೇಮಾವತಿ ಹಿನ್ನೀರಿನ ಅಂಚಿನಲ್ಲಿ ಬರುವ 17 ಅಂಚಿನ ಗ್ರಾಮಗಳ ಸರ್ವೆ ಕೆಲಸಕ್ಕಾಗಿ ಒಂದು ಉಪ ವಿಭಾಗವನ್ನು ಪ್ರತ್ಯೇಕವಾಗಿ ತೆರೆದು ಶೀತ ಪೀಡಿತ ಕಟ್ಟಡಗಳಿಗೆ ಮೌಲ್ಯಮಾಪನ ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಕುರಿತು ಕಾವೇರಿ ನೀರಾವರಿ ನಿಗಮವು ಅಗತ್ಯ ಕ್ರಮ ತೆಗೆದುಕೊಳ್ಳುತ್ತದೆ.

ಆ) ಪುನರ್ವಸತಿ ಒದಗಿಸಬೇಕಾದ ಗ್ರಾಮಗಳ ಸ್ಥಿತಿಗತಿಯ ವರದಿಯನ್ನು ಸಿದ್ಧಪಡಿಸಲಾಗಿದ್ದು, ವರದಿಯನ್ನು ದಿನಾಂಕ 30-04-2007 ರಂದು ಜಿಲ್ಲಾಧಿಕಾರಿಗಳು, ಹಾಸನ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಇ) ಪ್ರಕ್ರಿಯೆಯ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಹೆಚ್.ಎಂ. ವಿಶ್ವನಾಥ್ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 806 ಕ್ಕೆ ಅನುಬಂಧ

ಹೇಮಾವತಿ ಜಲಾಶಯದ ಹಿನ್ನೀರಿನಲ್ಲಿ ಬರುವ 17 ಅಂಚಿನ ಗ್ರಾಮಗಳು ಶೀತಪೀಡಿತವೆಂದು ಗುರುತಿಸಿ ತಾಲ್ಲೂಕುವಾರು ಗ್ರಾಮಗಳು ಈ ಕೆಳಕಂಡಂತಿರುತ್ತವೆ. (ದರ ಸೂಚಿ 2006–07 ನೇ ಸಾಲು)

ಕ್ರ.ಸಂ	ಅಂಚಿನ ಗ್ರಾಮಗಳ ಹೆಸರು	ಒಟ್ಟು ಮನೆಗಳ ಸಂಖ್ಯೆ	ಕಟ್ಟಡಗಳಿಗೆ ನೀಡ ಬೇಕಾಗಿರುವ ಮೊತ್ತ	ಕಾಲೋನಿ ನಿರ್ಮಾಣಕ್ಕೆ	ಒಟ್ಟು
1	2	3	4	5	6
1	ಮುಟ್ಟನಹಳ್ಳಿ ಕಾವಲು ಹಾಸನ ಆಲೂರು ತಾಲ್ಲೂಕು	30	27.07	25.43	52.50
2	ಸುಳಗೋಡು	117	190.46	40.54	231.00
3	ರಾಮೇನಹಳ್ಳಿ	32	84.22	30.78	115.00
4	ಕಿತಬೂರು	42	54.50	31.50	86.00
5	ಮಣಿಗನಹಳ್ಳಿ	45	76.30	31.70	108.00
6	ಕಡಬಗಾಲ	48	73.14	32.86	106.00
7	ಕೆರೆಕೊಪ್ಪಲು	10	10.37	22.63	33.00
8	ಹೊಳೆಕೊಪ್ಪಲು	27	37.10	27.90	65.00

9	ಹುಲಕುಂದ	22	42.80	25.20	68.00
10	ಹೆಮ್ಮಿಗೆ	47	67.50	31.00	98.50
11	ಕಾಗನೂರು	75	89.96	33.04	123.00
12	ಕಾಗನೂರು ಕೊಪ್ಪಲು	39	60.92	27.08	88.00
13	ಕುರೇಗಲ್ಲು	30	47.79	28.21	76.00
14	ಕಿತ್ತಗೆರೆ	20	26.05	21.95	48.00
	ಸಕಲೇಶಪುರ ತಾಲ್ಲೂಕು				
15	ನೆಲ್ಲುಲ್ಲಿ	39	100.59	30.41	131.00
16	ಬೆಳ್ಳೂರು	46	77.72	26.28	104.00
17	ನಿಡಿಗೆರೆ	08	17.70	12.30	30.00
	ಒಟ್ಟು	**677.00**	**1084.19**	**478.81**	**1563.00**

ಪೀಠಿಕೆ :– ಹೇಮಾವತಿ ಜಲಾಶಯದ 17 ಅಂಚಿನ ಗ್ರಾಮಗಳನ್ನು ಸ್ಥಳಾಂತರಿಸಬೇಕೆಂದು ಪುನರ್ವಸತಿ ಸಮಿತಿಯವರ ಅಭಿಪ್ರಾಯದ ಮೇರೆಗೆ ವರದಿಯನ್ನು ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನೆ, ಗೆರೂರುರವರು ಸರ್ಕಾರಕ್ಕೆ ದಿನಾಂಕ : 28–06–1990 ರಂದು ಸಲ್ಲಿಸಲಾಗಿತ್ತು. ಸರ್ಕಾರ ವರದಿಯನ್ನು ಪರಿಶೀಲಿಸಿ ತಿರಸ್ಕರಿಸಿರುತ್ತದೆ ಹಾಗೂ ಜನ ಪ್ರತಿನಿಧಿಗಳಿಗೆ ಈ ಬಗ್ಗೆ ಸೂಕ್ತ ಮನವರಿಕೆ ಮಾಡಿಕೊಡಲು ಸಹ ಸೂಚಿಸಿರುತ್ತಾರೆ.

ತದನಂತರ ಅಂದಿನ ಮುಖ್ಯ ಯೋಜನಾ ಮತ್ತು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಸಚಿವರು ದಿನಾಂಕ 19–08–1994 ರಂದು ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ಇವರಿಗೆ ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಈ ಹಿಂದಿನ ಪುನರ್ವಸತಿ ಸಮಿತಿಯವರು ಸಲ್ಲಿಸಿದ್ದ ವರದಿಯು ಸಮಂಜಸವಾಗಿಲ್ಲವೆಂದು ಮತ್ತು ತಜ್ಞರನ್ನೊಳಗೊಂಡ ಸಮಿತಿಯನ್ನು ಕಳುಹಿಸಿಕೊಟ್ಟು ಮತ್ತೊಮ್ಮೆ ಕೂಲಂಕೂಷವಾಗಿ ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ಸಲ್ಲಿಸುವಂತೆ ಆದೇಶಿಸಲಾಗಿತ್ತು. ಆದೇಶದ ಪ್ರಕಾರ ದಿನಾಂಕ 28–08–1994 ರಂದು ಜಂಟಿ ಪರಿವೀಕ್ಷಣಾ ಸಮಿತಿಯವರು ಗ್ರಾಮಗಳಿಗೆ ಖುದ್ದಾಗಿ ಸ್ಥಳ ಪರಿಶೀಲಿಸಿ ವರದಿಯನ್ನು ದಿನಾಂಕ 03–09–1994 ರಂದು ಸರ್ಕಾರಕ್ಕೆ ಸಲ್ಲಿಸಲಾಯಿತು. ವರದಿಯ ಪ್ರಕಾರ ದಿನಾಂಕ 16–03–1999 ರಂದು ರೇಖಾ ಅಂದಾಜು ಪಟ್ಟಿಯನ್ನು ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನೆ, ಗೆರೂರುರವರು ರೂ. 1082.70 ಲಕ್ಷಕ್ಕೆ (ಕಟ್ಟಡಗಳಿಗೆ ಮತ್ತು ಕಾಲೋನಿ ನಿರ್ಮಾಣಕ್ಕೆ) ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ತದನಂತರ ಹೇಮಾವತಿ ಜಲಾಶಯದಲ್ಲಿ ಮುಳುಗಡೆಯಾದ ಅಥವಾ ಶೀತಪೀಡವಾದ ಹಳ್ಳಿಗಳನ್ನು ಗುರ್ತಿಸಿ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸುವ ಬಗ್ಗೆ ಉನ್ನತಾಧಿಕಾರಿಗಳ ಸಮಿತಿಯನ್ನು ರಚಿಸಿ ವಿಭಾಗಾಧಿಕಾರಿಗಳು ಮೈಸೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ 18–10–2001 ರಂದು ಸರ್ಕಾರಿ ಆದೇಶ ಸಂಖ್ಯೆ : ಆರ್‌ಡಿ 29 ಆರ್‌ಇಹೆಚ್ 2001 ರಲ್ಲಿ ರಚಿಸಲಾಗಿತ್ತು. ತದನಂತರ ಸರ್ಕಾರಿ ಆದೇಶಕ್ಕೆ ತಿದ್ದುಪಡಿಮಾಡಿ ಸರ್ಕಾರಿ ಆದೇಶ ಸಂಖ್ಯೆ : ಆರ್‌ಡಿ 48 ಆರ್‌ಇಹೆಚ್ 2002, ದಿನಾಂಕ 18–09–2002 ರಲ್ಲಿ ಸಮಿತಿಯನ್ನು ಮಾರ್ಪಡಿಸಿ ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ಇವರು ಅಧ್ಯಕ್ಷರಾಗಿರುತ್ತಾರೆ. ಕಾರ್ಯದರ್ಶಿಯವರು, ಕಂದಾಯ ಇಲಾಖೆ, ಬೆಂಗಳೂರು ಇವರನ್ನೊಳಗೊಂಡ ಸಮಿತಿಯು ದಿನಾಂಕ 06–11–2003 ರಂದು ಸಕಲೇಶಪುರ ತಾಲ್ಲೂಕಿನ 3 ಗ್ರಾಮಗಳಾದ ನೆಲ್ಲುಲ್ಲಿ, ಬೆಳ್ಳೂರು ಮತ್ತು ನಿಡಿಗೆರೆ ಗ್ರಾಮಗಳನ್ನು ಸ್ಥಳ ಪರಿಶೀಲಿಸಿದ್ದು ವರದಿ ನಿರೀಕ್ಷಿಸಲಾಗಿದೆ.

ಇತ್ತೀಚಿನ ಹಂತ

ಜಿಲ್ಲಾಧಿಕಾರಿಗಳು, ಹಾಸನ ಇವರು ದಿನಾಂಕ 13–12–2005 ರಲ್ಲಿ ಉನ್ನತ ಸಮಿತಿಯನ್ನು ಮಾಡಿ ಮೇಲ್ಕಾಣಿಸಿದ ಎಲ್ಲಾ 17 ಹಳ್ಳಿಗಳನ್ನು ದಿನಾಂಕ 07–02–2007 ಮತ್ತು 09–02–2007 ರಂದು ಖುದ್ದಾಗಿ ಮತ್ತೊಮ್ಮೆ ಸ್ಥಳ ಪರಿಶೀಲಿಸಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ.

ಶ್ರೀ ಹೆಚ್.ಎಂ. ವಿಶ್ವನಾಥ್ :– ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ಆದರೆ, ಪ್ರಶ್ನೆ ಏನೆಂದರೆ ಹೇಮಾವತಿ ಜಲಾಶಯ ನಿರ್ಮಾಣವಾಗಿ ಸುಮಾರು 27 ವರ್ಷಗಳಾಯಿತು. ಅಷ್ಟು ವರ್ಷಗಳಿಂದಲೂ ಅಲ್ಲಿ ನೀರು ನಿಲ್ಲುತ್ತಿದೆ. ಇವತ್ತು ಜಲಾಶಯವು ಪೂರ್ಣ ಭರ್ತಿಯಾಗಿದೆ. ಏನು 17 ಹಳ್ಳಿಗಳಿವೆ, ಇಷ್ಟೂ ಹಳ್ಳಿಗಳಲ್ಲಿ ಇನ್ನು ಮೂರು ತಿಂಗಳ ಕಾಲದವರೆಗೆ ಜನರು ಅಲ್ಲಿ ವಾಸಿಸುವುಕ್ಕಾಗುವುದಿಲ್ಲ. ಪೂರ್ಣ ಶೀತವಾಗಿದೆ, ಮನೆಯೊಳಗಡೆ ನೀರು ಬರುತ್ತಿದೆ. ಇವರಿಗೆ 27 ವರ್ಷಗಳೂ ಬೇಕೇ? ಅಲ್ಲಿ ಪುನರ್ವಸತಿ ಕಲ್ಪಿಸುವುದಕ್ಕೆ, ಅಲ್ಲಿರುವ ಮನೆಗಳನ್ನು ಅಂದಾಜು ಮಾಡಿ, ಹಣಕಾಸು ನೀಡಿ. ಅವರುಗಳನ್ನು ಅಲ್ಲಿಂದ ಹೊರಗಡೆ ಕಳುಹಿಸುವುದಕ್ಕೆ 27 ವರ್ಷಗಳು ಬೇಕಾಗುವುದಿಲ್ಲ.

ಮೊನ್ನೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗ್ ನಡೆಯಿತು. ಮೀಟಿಂಗ್ ನಡೆದ ಬಳಿಕ ಅಲ್ಲಿಂದ ಮುಂದಕ್ಕೆ ಏನೂ ಕೆಲಸವಾಗಿಲ್ಲ. ಆ ಸ್ಥಳಕ್ಕೆ ಅಧಿಕಾರಿಗಳು ಹೋಗಿದ್ದಾರೆಂದು ಇಲ್ಲಿ ಹೇಳುತ್ತಾರೆ. ಆದರೆ, ಒಂದು ವರದಿ ನೀಡುವುದಕ್ಕೆ ಈಗಾಗಲೇ ಸಕಲೇಶಪುರದ ಮೂರು ಗ್ರಾಮಗಳಲ್ಲಿ ಸ್ಥಳ ಪರಿಶೀಲನೆ ಮಾಡಿದ್ದಾರೆ. ಸ್ಥಳ ಪರಿಶೀಲನೆ ನಡೆಸಿರುವುದು 2003 ರಲ್ಲಿ. 4 ವರ್ಷಗಳಾದರೂ ಇನ್ನೂ ವರದಿ ಬಂದಿಲ್ಲವೆಂದು ಹೇಳುತ್ತಾರೆ. ಆ ವರದಿ ಯಾವತ್ತು ಬರುತ್ತದೆ? ಅವರಿಗೆ ಯಾವಾಗ ಪುನರ್ವಸತಿ ಕಲ್ಪಿಸುವುದಕ್ಕೆ ಸಾಧ್ಯವಾಗುತ್ತದೆ? ದಯಮಾಡಿ ನಾನು ಕೇಳುವುದಿಷ್ಟೆ. ಸಚಿವರು ತಮ್ಮ ಅಧಿಕಾರಿಗಳೊಂದಿಗೆ ಇವತ್ತು ಬರುವುದು ಸರಿಯಾದ ಸಮಯವಾಗಿದೆ. ತಾವು ಈಗಲೇ ಬಂದರೆ, ಆ 17 ಹಳ್ಳಿಗಳ ಸ್ಥಿತಿ–ಗತಿ ನೋಡಿ.....

ಅಧ್ಯಕ್ಷರು :– ನೀವು ಹೀಗೆ ಭಾಷಣ ಮಾಡಲು ನಿಂತರೆ ಹೇಗೆ? ಈಗಾಗಲೇ ಒಂದು ಗಂಟೆ ಆಗಿ ಹೋಯಿತು. ಎಲ್ಲಾ ವಿಚಾರಗಳನ್ನೂ ಪ್ರಶ್ನೋತ್ತರ ಸಮಯದಲ್ಲೇ ಕೇಳಿದರೆ, ಹೇಗೆ ಪ್ರಶ್ನೋತ್ತರ ಸಮಯವಾಗುತ್ತದೆ?

ಶ್ರೀ ಹೆಚ್.ಎಂ. ವಿಶ್ವನಾಥ್ :– ಹೇಳದೇ ಇದ್ದರೆ, ಏನು ಮಾಡುವುದು ಸ್ವಾಮಿ? 27 ವರ್ಷವಾದರೂ.....

ಅಧ್ಯಕ್ಷರು :– ನೋಡಿ ಸ್ವಾಮಿ, ಪ್ರಶ್ನೋತ್ತರ ಸಮಯದಲ್ಲಿ ಪ್ರಶ್ನೆಗಳನ್ನು ಸರಿಯಾದ ರೀತಿಯಲ್ಲಿ ಕೇಳಿ ಉತ್ತರ ಪಡೆಯಿರಿ. ಈ ತರಹವಾದರೆ, ದಿವಸಕ್ಕೆ ನಾವು 5 ಪ್ರಶ್ನೆಗಳನ್ನು ಹಾಕಬೇಕಾಗುತ್ತದೆ.

ಶ್ರೀ ಹೆಚ್.ಎಂ. ವಿಶ್ವನಾಥ್ :– 17 ಹಳ್ಳಿಗಳವರು ಏನು ಮಾಡಬೇಕು ಹೇಳಿ? ಅದಕ್ಕೆ ಸಚಿವರು ಉತ್ತರ ಕೊಡಲಿ.

ಅಧ್ಯಕ್ಷರು :– ಈಗಾಗಲೇ 1 ಗಂಟೆ ಆಗಿ ಹೋಯಿತು. ಇನ್ನು ಉಳಿದಿರುವ 4–5 ಪ್ರಶ್ನೆಗಳನ್ನು ನಾನು lapse ಮಾಡಬೇಕಾಗಿದೆ. ಇದರ ಜೊತೆಗೆ, ಮೂರು held over questions ಇದೆ. ಅದಕ್ಕೋಸ್ಕರ, ಇವತ್ತು ನಾನು ಸಮಯ ಕೊಡುತ್ತಿದ್ದೇನೆ. ನಾಳೆ ತಾವೆಲ್ಲರೂ ದಯಮಾಡಿ ಸಹಕರಿಸಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ :– ಮಾನ್ಯ ಮುಖ್ಯಮಂತ್ರಿಗಳು ಸಭೆ ಕರೆದ ನಂತರ ಜಿಲ್ಲಾಧಿಕಾರಿಗಳಿಗೆ ಅದರ ಬಗ್ಗೆ ವರದಿ ಕೊಡಬೇಕೆಂದು ಹೇಳಲಾಗಿದೆ. ಒಂದು Sub Committee ಕೂಡ ಮಾಡಿಕೊಂಡು ಜಿಲ್ಲಾಧಿಕಾರಿಗಳಿಗೆ ಒಂದು ರಿಪೋರ್ಟ್ ಕಳುಹಿಸಿದ್ದಾರೆ. ಈ ವಾರದಲ್ಲೇ ಮಾನ್ಯ ಶಾಸಕರುಗಳನ್ನು, ಜಿಲ್ಲಾಧಿಕಾರಿಗಳನ್ನು ಕರೆದು ಅದಕ್ಕೆ ಸರ್ಕಾರ ಸೂಕ್ತವಾದ ಕ್ರಮವನ್ನು ಖಂಡಿತವಾಗಿಯೂ ತೆಗೆದುಕೊಳ್ಳುತ್ತದೆ.

ಶ್ರೀ ಬಿ. ಶಿವರಾಮು :– ಈಶ್ವರಪ್ಪನವರೆ, ಆಲೂರು ತಾಲ್ಲೂಕಿನದು ನಿಜವಾಗಿಯೂ ಬಹಳ ಸಮಸ್ಯೆ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ :– 27 ವರ್ಷದ್ದು ಇನ್ನೊಂದು ವಾರದಲ್ಲಿ ಒಂದು ರೂಪಕ್ಕೆ ತರುತ್ತೇನೆಂದು ಹೇಳುತ್ತಿದ್ದೇನೆ.

<u>ನೇತ್ರಾವತಿ ತಿರುವು ಯೋಜನೆಯ ಅಧ್ಯಯನದ ಮಾಹಿತಿ :–</u>

120 (999) ಶ್ರೀ ಬಿ. ಶಿವರಾಮು (ಗಂಡಸಿ) :– ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ನೇತ್ರಾವತಿ ತಿರುವು ಯೋಜನೆಯ ಅಧ್ಯಯನ ವರದಿ ಸರ್ಕಾರಕ್ಕೆ ಬಂದಿದೆಯೇ;